

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಮಾನವೀಯತೆ ಮರೆದ ಬ್ರಿಟನ್ ನ್ಯಾಯಾಲಯ

**ಕಾ**ನೂನು ಮತ್ತು ಮಾನವೀಯತೆಯ ಮಧ್ಯೆ ಸಂಘರ್ಷ ಉಂಟಾದಾಗ ಯಾವುದನ್ನು ಅನುಸರಿಸಬೇಕೆಂಬ ತಾಕಲಾಟ ಮನಸ್ಸಿನಲ್ಲಿ ಉಂಟಾಗುತ್ತದೆ. ನಾಗರೀಕರಾದವರು ಕಾನೂನು ಪರಿಪಾಲನೆಯನ್ನು ಮಾಡಬೇಕೆಂದು ದೇಶದ ಕಾನೂನು ನಿರೀಕ್ಷಿಸುತ್ತದೆ. ಆದರೆ ಕೆಲವು ಸಂದರ್ಭಗಳಲ್ಲಿ ಮಾನವೀಯ ಭಾವನೆಗಳಿಗೆ ಬೆಲೆ ಕೊಡದೆ ಕೇವಲ ಕಾನೂನು ಪರಿಪಾಲನೆ ಮಾಡಲು ಮುಂದಾಗುವುದು ಅವ್ಯಾವಹಾರಿಕ ಹಾಗೂ ಅಮಾನುಷ ಕೃತ್ಯವಾಗಿ ತೋರುತ್ತದೆ. ಈ ವಿಷಯವಾಗಿ ಕಳೆದ ವಾ೯ ಬರೆದ ಲೇಖನಕ್ಕೆ ಬೆಂಗಳೂರಿನ ಓದುಗರಾದ ಚಂದ್ರು "ಕಾನೂನಿನ ಮುಖ್ಯ ಗುರಿ ವ್ಯಕ್ತಿ ಮತ್ತು ಸಮಾಜದ ಒಳಿತನ್ನು ಬಯಸುವುದು. ಆದಕಾರಣ ಅದು ಮಾನವೀಯತೆಗಿಂತ ದೊಡ್ಡದೇನೂ ಅಲ್ಲ" ಎಂದು ಪ್ರತಿಕ್ರಿಯಿಸಿದ್ದಾರೆ. ನಮ್ಮ ಅಂಕಣ ಬರಹ ಪ್ರಕಟವಾದ ದಿನವೇ ಅದೇ ಇಂಗ್ಲೆಂಡಿನ ವಿಮಾನನಿಲ್ದಾಣದ ಸುರಕ್ಷತಾಸಿಬ್ಬಂದಿಯ ಬೇಜವಾಬ್ದಾರಿಯಿಂದ 11 ವರ್ಷದ ಬಾಲಕನೊಬ್ಬ ಮ್ಯಾಂಚೆಸ್ಟರ್‌ನಿಂದ ರೋಮ್‌ಗೆ ಯಾವ ಪಾಸ್‌ಪೋರ್ಟ್, ಟಿಕೆಟ್ ಅಥವಾ ಬೋರ್ಡಿಂಗ್‌ಪಾಸ್ ಇಲ್ಲದೆ ಪ್ರಯಾಣ ಮಾಡಿದ ಸೋಜಿಗದ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ತಾಯಿ ಶಾಪಿಂಗ್‌ಗೆ ಹೋದಾಗ ತಪ್ಪಿಸಿಕೊಂಡು ವಿಮಾನ ನಿಲ್ದಾಣಕ್ಕೆ ಬಂದ ಬಾಲಕ ಬೇರೊಂದು ಕುಟುಂಬವರ್ಗದೊಡನೆ ಹೇಗೋ ಸೇರಿಕೊಂಡು ಪ್ರಯಾಣಿಸಿದ್ದ! ಸುರಕ್ಷತಾ ಸಿಬ್ಬಂದಿ 11 ವರ್ಷದ ಆ ಬಾಲಕನನ್ನು ಹೀಗೆ ಬಿಡಬಹುದಾದರೆ 2 ವರ್ಷದ ಮಗುವಿನ ಅನಾರೋಗ್ಯ ಪರಿಸ್ಥಿತಿಯನ್ನು ನೋಡಿ ಮಾನವೀಯ ದೃಷ್ಟಿಯಿಂದ ತಾಯಿಯ ಬಳಿ ಇದ್ದ 200 ml ಔಷಧಿಯನ್ನು ಏಕೆ ಬಿಡಬಾರದಾಗಿತ್ತು ಎಂದು ಓದುಗರ ಪ್ರಶ್ನೆ.

ಪತ್ರಿಕಾ ವರದಿಯ ಪ್ರಕಾರ ಬೇಜವಾಬ್ದಾರಿಯ ಆರೋಪದ ಮೇಲೆ ಸುರಕ್ಷತಾ ಸಿಬ್ಬಂದಿಯ ನಾಲ್ವರು ಅಧಿಕಾರಿಗಳನ್ನು ಅಮಾನತುಗೊಳಿಸಲಾಗಿದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಸಂಗತಿಯೆಂದರೆ ಆ ಹುಡುಗ ಅಧಿಕಾರಿಗಳ ಕಣ್‌ತಪ್ಪಿಸಿಕೊಂಡು ಹೋಗಿದ್ದಾನೆ; ಯಾವುದೇ ಭಯೋತ್ಪಾದಕ ಕೃತ್ಯ ಎಸಗಿಲ್ಲ. ಆದರೂ ಅಧಿಕಾರಿಗಳಿಂದ ತಪ್ಪಾಗಿದೆ. ಒಂದು ಪಕ್ಷ ಏನಾದರೂ ಅನಾಹುತ ಘಟಿಸಿದ್ದರೆ ಸುರಕ್ಷತಾ ಸಿಬ್ಬಂದಿಯನ್ನೇ ಹೊಣೆಗಾರರನ್ನಾಗಿ ಮಾಡಲಾಗುತ್ತಿತ್ತು. ಆದಕಾರಣ ಹಿಂದಿನ ವಾರ ಬರೆದ ತಾಯಿ-ಮಗುವಿನ ಘಟನೆಯಲ್ಲಿ ಕಾನೂನಿನನ್ವಯ ನಡೆದುಕೊಂಡ ಅಧಿಕಾರಿಯ ಕರ್ತವ್ಯಪ್ರಜ್ಞೆ ಅಮಾನವೀಯ ನಡವಳಿಕೆಯೆಂದು ಆರೋಪಿಸಲು ಬರುವುದಿಲ್ಲ.

ಮಾನವೀಯತೆಯನ್ನು ತೋರಿಸುವುದು ತಪ್ಪಲ್ಲ; ಕಾನೂನನ್ನು ಉಲ್ಲಂಘಿಸಿ ಮಾನವೀಯತೆಯನ್ನು ತೋರಿಸುವುದು ತಪ್ಪು ಎಂಬುದು ಕಾನೂನುತಜ್ಞರ ಅಭಿಪ್ರಾಯ. ಅದರಿಂದ ಅಪರಾಧಿಯನ್ನು ರಕ್ಷಿಸಿದಂತಾಗುತ್ತದೆ. ಅವನ ಕಾನೂನುಬಾಹಿರ ಕೃತ್ಯಗಳನ್ನು ಮುಚ್ಚಿಹಾಕಿದಂತಾಗುತ್ತದೆ. ಮತ್ತೆ ಅಂತಹ ಅಪರಾಧಗಳನ್ನು ಮಾಡಲು ಪ್ರೋತ್ಸಾಹಿಸಿದಂತಾಗುತ್ತದೆಯೆಂಬುದು ಅವರ ವಾದ. ನಮ್ಮ ಆತ್ಮೀಯ ಒಡನಾಟದಲ್ಲಿರುವ ನ್ಯಾಯಾಧೀಶರೊಬ್ಬರು ದೂರವಾಣಿಯಲ್ಲಿ ಸಂಪರ್ಕಿಸಿ ಅಂಕಣ ಬರಹದ ಮಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಅವರ ಸ್ವಾನುಭವಕ್ಕೆ ಬಂದ ಕೆಲವು ವಿಚಾರಗಳನ್ನು ನಮ್ಮೊಂದಿಗೆ ಹಂಚಿಕೊಂಡರು. ಅವರು ಕೊಟ್ಟ ಉದಾಹರಣೆ ನಮ್ಮನ್ನು ಆಲೋಚನಾಪರರನ್ನಾಗಿಸಿತು:

ಅಗಂತುಕನೊಬ್ಬ ಮನೆಯೊಳಗೆ ದಿಢೀರನೆ ನುಗ್ಗಿದ. ಮನೆಯಲ್ಲಿ ಗೃಹಿಣಿಯೊಬ್ಬಳೇ ಇದ್ದಳು. ಆಗಂತುಕನ ಕೈ ರಕ್ತಮಯವಾಗಿದ್ದನ್ನು ನೋಡಿ ಭಯಭೀತಳಾದಳು. ಆಗಂತುಕ ಅವಳಿಗೆ ಧೈರ್ಯ ಹೇಳಿ ತನ್ನನ್ನು ರೌಡಿಗಳು ಅಟ್ಟಿಸಿಕೊಂಡು ಬರುತ್ತಿದ್ದಾರೆ, ಯಾರಾದರೂ ಕೇಳಿಕೊಂಡು ಬಂದರೆ ಹೇಳಬೇಡಿ ಎಂದು ಮನೆಯಲ್ಲಿ ಅವಿತುಕೊಂಡ. ಸ್ವಲ್ಪ ಹೊತ್ತಿನಲ್ಲಿಯೇ ಪೋಲೀಸರು ಬಂದು ಆ ಮಹಿಳೆಯನ್ನು ವಿಚಾರಿಸಿದರು. ಯಾರೂ ಇಲ್ಲವೆಂದು ಮಹಿಳೆ ಹೇಳಿದಳು. ಪೋಲೀಸರು ಮತ್ತೆ ಸ್ವಲ್ಪ ಹೊತ್ತಿನ ಮೇಲೆ ಬಂದು ಕೊಲೆಯಾಗಿದ್ದ ಒಬ್ಬನ ಶವವನ್ನು ತೋರಿಸಿ ಸತ್ತ ವ್ಯಕ್ತಿಯನ್ನು ಗುರುತಿಸಲು ಸಾಧ್ಯವೇ ಎಂದು ಆ ಮಹಿಳೆಯನ್ನು ಕೇಳಿದರು. ಕೊಲೆಯಾಗಿದ್ದ ವ್ಯಕ್ತಿ ಬೇರೆ ಯಾರೂ ಆಗಿರದೆ ಆ ಮಹಿಳೆಯ ಗಂಡನೇ ಆಗಿದ್ದ! ಆ ವೇಳೆಗೆ ಕೊಲೆಗಾರ ಮನೆಯಿಂದ ತಪ್ಪಿಸಿಕೊಂಡು ಹೋಗಿದ್ದ! ಈ ಉದಾಹರಣೆಯಲ್ಲಿ ಆ ಮಹಿಳೆ ಆಗಂತುಕನಿಗೆ ಹೆದರಿ ಮನೆಯಲ್ಲಿ ಅವಿತುಕೊಳ್ಳಲು ಅವಕಾಶಕೊಟ್ಟಿರುವ ಸಾಧ್ಯತೆ ಇದೆ, ಮಾನವೀಯತೆಯಿಂದ ಅಲ್ಲ. ಅವನ ಭೀತಿಯಿಂದಲೇ ಪೋಲೀಸರಿಗೆ ಹೇಳದಿರುವ ಸಾಧ್ಯತೆಯೂ ಇದೆ.

ಕಳೆದ ವಾರ ಇಂಗ್ಲೆಂಡಿನಿಂದ ವಾಪಾಸು ಹೊರಡುವ ದಿನ ಬ್ರಿಟನ್ ನ್ಯಾಯಾಲಯವೊಂದು ನೀಡಿದ ತೀರ್ಪು ಅಲ್ಲಿಯ Daily Mail ಪತ್ರಿಕೆಯಲ್ಲಿ ವರದಿಯಾಗಿತ್ತು. ಅನಿವಾಸಿ ಭಾರತೀಯ ಮಹಿಳೆಯೊಬ್ಬಳು ತನ್ನ 7 ತಿಂಗಳ ಹಸುಗೂಸನ್ನು ಒಂಟಿಯಾಗಿ ಮನೆಯಲ್ಲಿ ಬಿಟ್ಟು ಪ್ರತಿದಿನವೂ ಬೆಳಗ್ಗೆ ಮತ್ತು ಸಂಜೆ ಹೊರಗೆ ಹೋಗುತ್ತಿದ್ದಳು. ಇದನ್ನು ಗಮನಿಸಿದ ಪಕ್ಕದ ಮನೆಯವರು ಪೋಲೀಸರಿಗೆ ದೂರು ಸಲ್ಲಿಸಿದರು. ಪೋಲೀಸರು ಆಕೆಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದರು. ಇಂಗ್ಲೆಂಡಿನಲ್ಲಿ ಮಕ್ಕಳ ಪೋಷಣೆಯ ವಿಚಾರದಲ್ಲಿ ಅನಾದರಣೆ ಮಾಡುವುದು ಶಿಕ್ಷಾರ್ಹ ಅಪರಾಧ. ಹಾಗೆ ಅನಾದರಣೆ ಮಾಡಿದ ತಂದೆತಾಯಂದಿರಿಗೆ 10 ವರ್ಷಗಳ ಜೈಲು ಶಿಕ್ಷೆ ವಿಧಿಸಲಾಗುತ್ತದೆ. ಆದರೆ ಆ ತಾಯಿ ನಿತ್ಯವೂ ತನ್ನ 7 ತಿಂಗಳ ಮಗುವನ್ನು ಮನೆಯಲ್ಲಿ ಒಂಟಿಯಾಗಿ ಬಿಟ್ಟು ಹೋಗುತ್ತಿದ್ದುದು ತನ್ನ 7 ಮತ್ತು 5 ವರ್ಷದ ಇನ್ನಿಬ್ಬರು ಮಕ್ಕಳನ್ನು ಶಾಲೆಗೆ ಬಿಟ್ಟು ಬರಲು. ಮನೆಯಲ್ಲಿ ಮಗುವನ್ನು ನೋಡಿಕೊಳ್ಳಲು ಯಾರೂ ಇರಲಿಲ್ಲ. ಅವಳ ಮದುವೆ ಪ್ರೇಮವಿವಾಹವಾಗಿದ್ದರಿಂದ ಆಕೆಯ ತಂದೆತಾಯಿಗಳು ತಾವು ತೋರಿಸಿದ ಗಂಡನ್ನು ಮದುವೆಯಾಗಲಿಲ್ಲವೆಂದು ಸಿಟ್ಟಾಗಿ ದೂರಮಾಡಿದ್ದರು. "ಇನ್ನಿಬ್ಬರು ಮಕ್ಕಳನ್ನು ಶಾಲೆಗೆ ಕರೆದುಕೊಂಡು

ಹೋಗುವಾಗ ಮನೆಯಲ್ಲಿ ಬಿಟ್ಟುಬಂದಿದ್ದ ಮಗುವನ್ನು ನೆನೆಸಿಕೊಂಡು ನನ್ನ ಎದೆ ಹೊಡೆದುಕೊಳ್ಳುತ್ತಿತ್ತು. ಆದರೂ ತೊಟ್ಟಿಲಲ್ಲಿ ಮಲಗಿಸಿ ಬಂದಿರುವುದರಿಂದ ಮಗು ನಿದ್ರಿಸುತ್ತಿರುತ್ತದೆ, ಏನೂ ಆಗುವುದಿಲ್ಲವೆಂದು ಧೈರ್ಯ ತಂದುಕೊಳ್ಳುತ್ತಿದ್ದೆ. ನನ್ನ ಮಗುವನ್ನು ನಾನು ತುಂಬಾ ಪ್ರೀತಿಸುತ್ತೇನೆ. ಮಗುವನ್ನು ಮನೆಯಲ್ಲಿ ಒಂಟಿಯಾಗಿ ಬಿಟ್ಟು ಹೋಗುವುದು ಕಾನೂನು ಬಾಹಿರವೆಂದು ನನಗೆ ಗೊತ್ತಿರಲಿಲ್ಲ. ಮುಂದೆಂದೂ ಹೀಗಾಗದಂತೆ ನೋಡಿಕೊಳ್ಳುತ್ತೇನೆ. ತೊಟ್ಟಿಲಲ್ಲಿರುವ ಹಸುಗೂಸು ನನ್ನ ಜೀವನದ ಆಶಾಕಿರಣ. ಅದಿಲ್ಲದಿದ್ದರೆ ನಾನು ಬದುಕಿರಲಾರೆ" ಎಂದು ಆ ತಾಯಿ ನ್ಯಾಯಾಧೀಶರ ಮುಂದೆ ಬಿಕ್ಕಿ ಬಿಕ್ಕಿ ಅತ್ತಳು.

ನ್ಯಾಯಾಧೀಶರು ಆ ತಾಯಿಯ ಅಂತಃಕರಣದ ಮಾತುಗಳನ್ನು ಕೇಳಿ ಮಾನವೀಯ ದೃಷ್ಟಿಯಿಂದ ಆಕೆಯನ್ನು ಬಿಡುಗಡೆ ಮಾಡಿದರು. 12 ತಿಂಗಳು ಆಕೆಯ ಮೇಲ್ವಿಚಾರಣೆಯನ್ನು ಮಾಡಲು ಪೋಲೀಸರಿಗೆ ತಾಕೀತು ಮಾಡಿದರು. "ಮಗುವಿನ ವಿಚಾರವಾಗಿ ನಿಷ್ಕಾಳಜಿಯುಳ್ಳ ತಾಯಿ ನೀನಲ್ಲ. ಯಾವುದೋ ಕ್ಲಬ್ಬಿಗೆ ಹೋಗಿ ಮೋಜು ಮಸ್ತಿ ಮಾಡಲು ಮಗುವನ್ನು ಮನೆಯಲ್ಲಿ ಬಿಟ್ಟುಹೋಗಿದ್ದರೆ ನಿನಗೆ ಜೈಲುಶಿಕ್ಷೆ ವಿಧಿಸುತ್ತಿದ್ದೆ" ಎಂದ ನ್ಯಾಯಾಧೀಶರು "ಮಕ್ಕಳ ಪೋಷಣೆಯಲ್ಲಿ ಎಲ್ಲ ತಂದೆತಾಯಂದಿರು ತಪ್ಪು ಮಾಡುತ್ತಾರೆ. ಈ ಮಾತು ನನಗೂ ಅನ್ವಯಿಸುತ್ತದೆ" ಎಂದು ಹೇಳಲು ಹಿಂಜರಿಯಲಿಲ್ಲ. ಬ್ರಿಟನ್ನಿನ ಪ್ರಧಾನಿಯಾದ David Cameron ಸಹ ತಂದೆಯಾಗಿ ತಮ್ಮ ಮಕ್ಕಳ ಬಗ್ಗೆ ಎಂತಹ ನಿರ್ಲಕ್ಷ್ಯ ತೋರಿದ್ದಾರೆಂದು ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ ತರಾಟೆಗೆ ತೆಗೆದುಕೊಂಡಿದ್ದಾರೆ. ಬ್ರಿಟನ್ ಪ್ರಧಾನಿಗೆ ಮೂರು ಜನ ಮಕ್ಕಳು. ಇತ್ತೀಚೆಗೆ ತನ್ನ ಪತ್ನಿ Samantha ಮತ್ತು ಮಕ್ಕಳೊಂದಿಗೆ ಹೋಟೆಲೊಂದರಲ್ಲಿ ಏರ್ಪಡಿಸಿದ್ದ ಔತಣಕೂಟಕ್ಕೊಂದು ಹೋಗಿದ್ದರು. ವಾಪಾಸು ಬರುವಾಗ ಗಂಡ ಹೆಂಡತಿ ಬೇರೆ ಬೇರೆ ಕಾರುಗಳನ್ನು ಹತ್ತಿಕೊಂಡರು. ಎಲ್ಲಾ ಮಕ್ಕಳು ತಾಯಿಯ ಕಾರಿನಲ್ಲಿದ್ದಾರೆಂದು ಪ್ರಧಾನಿ ಭಾವಿಸಿದರು. ಆದರೆ ಇಬ್ಬರು ಮಕ್ಕಳು ಮಾತ್ರ ತಾಯಿಯ ಕಾರನ್ನು ಹತ್ತಿಕೊಂಡಿದ್ದರು. ಹಿರಿಯ ಮಗಳಾದ 8 ವರ್ಷದ Nancy ಹೋಟೆಲ್‌ನಿಂದ ಹೊರಡುವ ವೇಳೆ ಬಾತ್‌ರೂಂಗೆ ಹೋಗಿದ್ದನ್ನು ಪ್ರಧಾನಿಯಾಗಲೀ, ಆತನ ಪತ್ನಿಯಾಗಲೀ, ಸಿಬ್ಬಂದಿಯಾಗಲೀ ಗಮನಿಸಿರಲಿಲ್ಲ!

ಬ್ರಿಟಿಷ್ ಪ್ರಧಾನಿಗೆ ಅಷ್ಟೊಂದು ಸಿಬ್ಬಂದಿ ಇದ್ದರೂ ಬಾತ್‌ರೂಂಗೆ ಹೋದ ಅವರ ಮಗಳ ಮೇಲೆ ನಿಗಾ ವಹಿಸುವಷ್ಟು ಜವಾಬ್ದಾರಿ ಇರಲಿಲ್ಲವೆಂದರೆ ಯಾವ ಬಂಧುಬಾಂಧವರ ಸಹಾಯವೂ ಇಲ್ಲದ ಸಾಮಾನ್ಯ ಪ್ರಜೆಯಾದ ಆ ಬಡಪಾಯಿ ತಾಯಿಗೆ ಮೂರು ಮಕ್ಕಳನ್ನು ಜೋಪಾನ ಮಾಡುವುದು ಎಷ್ಟೊಂದು ಕಷ್ಟಕರ! ಅಕ್ಕ ಪಕ್ಕದ ಮನೆಯವರು ಪೋಲೀಸರಿಗೆ ದೂರು ಕೊಟ್ಟರೇ ವಿನಾ, ನಿನ್ನ ಮಗುವನ್ನು ಹಾಗೆ ಮನೆಯಲ್ಲಿ ಬಿಟ್ಟುಹೋಗುವುದು ಬೇಡ, ಏನಾದರೂ ಅನಾಹುತವಾದೀತು; ನಮ್ಮ ಮನೆಯಲ್ಲಿ ಬಿಟ್ಟುಹೋಗು, ನಾವು ನೋಡಿಕೊಳ್ಳುತ್ತೇವೆ ಎಂದು ಏಕೆ ಮಾನವೀಯ ಭಾವನೆಯನ್ನು ತೋರಿಸಲಿಲ್ಲ? ಅಕ್ಕಪಕ್ಕದ ಮನೆಯವರು ತೋರದ ಸಹಾನುಭೂತಿಯನ್ನು ನ್ಯಾಯಾಧೀಶರು ತೋರಿದರು. ತನ್ನ ಪರಿಸ್ಥಿತಿ ಮತ್ತು ಭಾವನೆಗಳನ್ನು ನ್ಯಾಯಾಧೀಶರು ಅರ್ಥಮಾಡಿಕೊಂಡು ಬಿಡುಗಡೆ ಮಾಡಿದ್ದಕ್ಕಾಗಿ ಆ ಬಡಪಾಯಿ ಮಹಿಳೆ ಕೃತಜ್ಞತೆ ಸೂಚಿಸಿ ತನ್ನ ಮುದ್ದು ಮಗುವಿನೊಂದಿಗೆ ನ್ಯಾಯಾಲಯದಿಂದ ಹೊರನಡೆದಳು!

2.8.2012

ಶ್ರೀ ತರಳಬಾಳು ಜಗದ್ಗುರು
ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑